**ಇಂದು ದಿನಾಂಕ:03.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎಸ್.ಎಸ್.ವಕೀಲರಿಂದಃ**

2 ನೇ ಪ್ರತಿವಾದಿ ಎಂದರೆ ನನ್ನ ಗಂಡನ ಸಹೋದರಿಯನ್ನು 1 ನೇ ಪ್ರತಿವಾದಿಗೆ ಮದುವೆ ಮಾಡಿದ್ದಾರೆ ಎಂದರೆ ಸರಿ. ನನ್ನ ಮತ್ತು 2 ನೇ ಪ್ರತಿವಾದಿಯ ಮದುವೆ ಒಂದೇ ದಿನ ಆಗಿದೆ ಎಂದರೆ ಸರಿ. ಎರಡೂ ಮದುವೆಯ ಖರ್ಚುಗಳನ್ನು 1 ನೇ ಪ್ರತಿವಾದಿ ಭರಿಸಿದ್ದಾರೆ ಎಂದರೆ ಸುಳ್ಳು. ನನ್ನ ತಂದೆ ಬದುಕಿದ್ದಾಗ ಬ್ಯಾಂಕ್ ನಿಂದ ಪಡೆದ ಸಾಲಗಳನ್ನು ತೀರಿಸಲಾಗಿದೆ ಸುಸ್ತಿದಾರರಾಗಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬ್ಯಾಂಕ್ ಸಾಲ ತೀರಿಸದಿದ್ದ ಕಾರಣ ಆಸ್ತಿಗಳನ್ನು ಹರಾಜುಗೆ ಇಡಲಾಗಿತ್ತು ಎಂದರೆ ಸರಿ. ನನ್ನ ತಂದೆ ಮಾಡಿದ್ದ ಸಾಲವನ್ನು ತೀರಿಸಲು ಮತ್ತು ನಮ್ಮ ಮದುವೆಗಾಗಿ ಮಾಡಿದ್ದ ಕೈಸಾಲವನ್ನು ತೀರಿಸಲು 1 ನೇ ಪ್ರತಿವಾದಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಯಾವುದೇ ಸಾಲ ಇರಲಿಲ್ಲ. ಜಮೀನುಗಳನ್ನು ಅಭಿವೃದ್ಧಿಪಡಿಸಲು ಈಗಲೂ ಸಹ 1 ನೇ ಪ್ರತಿವಾದಿ ಹಲವು ಬ್ಯಾಂಕ್ ಗಳಿಂದ ಸಾಲ ಮಾಡಿದ್ದಾರೆ ಎಂದರೆ ಸುಳ್ಳು. 1 ನೇ ಪ್ರತಿವಾದಿಗೆ ಮದ್ಯಪಾನ ಮಾಡುವ ಮತ್ತು ಇಸ್ಪಿಟ್ ಆಡುವ ಚಟಗಳು ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮದ್ಯಪಾನ ಮಾಡುವ ಮತ್ತು ಇಸ್ಪಿಟ್ ಆಡುವ ಚಟಗಳು ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾಡಿರುವ ಸಾಲಕ್ಕೆ ನಾನು ಕೂಡ ಹೊಣೆಗಾರಳಾಗುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**